ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯದಲ್ಲಿ ಈ ವಿಷಯದ ಬಗ್ಗೆ ಬೆಂಕಿ ಹತ್ತಿ ಉರಿಯುತ್ತಿದೆ.

ಅಧ್ಯಕ್ಷರು: ಅವರು ಏನು ಹೇಳುತ್ತಾರೆಂಬುದನ್ನು ಮೊದಲು ಕೇಳಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ನಾನು ಹೇಳುವುದನ್ನು ಮೊದಲು ಕೇಳಿ. ಸದನವನ್ನು ಇವತ್ತು ನಡೆಸಬೇಕೆಂಬ ಇಚ್ಛೆ ನಿಮಗೆ ಇದ್ದರೆ ನಡೆಸಿಕೊಂಡು ಹೋಗಿ. ಈ ಪ್ರಶ್ನೋತ್ತರ ವೇಳೆಗೆ ನಾನಂತೂ ಭಾಗವಹಿಸುವುದಿಲ್ಲ. ಇಡೀ ರಾಜ್ಯದ ಜನತೆ ನಿಮ್ಮನು ನೋಡಿ ನಾಳೆ ದಿವಸ ನಿಮ್ಮನು ಶಪಿಸುತ್ತಾರೆ. ಈ ರಾಜ್ಯಕ್ಕೆ ಬೆಂಕಿ ಬಿದ್ದಿದೆ, ಕನ್ನಡಿಗರಿಗೆ ಅನ್ಯಾಯವಾಗಿದೆ. 5ನೇ ತಾರೀಖಿನ ದಿವಸ ಜಡ್ಜ್‌ಮೆಂಟ್ ಬಂದಿದೆ. ಇವತ್ತು 11ನೇ ತಾರೀಖು ಆಗಿದ್ದರೂ ಇದರ ಬಗ್ಗೆ ನಾವೇನು ತೀರ್ಮಾನ ತೆಗೆದುಕೊಂಡಿಲ್ಲ. ಆ ತೀರ್ಮಾನವನ್ನು ಈ ಸದನ ತೆಗೆದುಕೊಳ್ಳದೇ ಬೇರೆ ವಿಚಾರ ಮತ್ತು ಪ್ರಶ್ನೋತ್ತರ ವೇಳೆ ಬೇಡವೇ ಬೇಡ. ನಿಮ್ಮ ಪ್ರಶ್ನೆಗಳ ಪಟ್ಟಿಯನ್ನು ಹರಿದು ಬಿಸಾಕಿ ಈ ಸದನದಿಂದ ಹೊರಗಡೆ ಹೋಗುತ್ತೇನೆ. ನಿಮ್ಮ ಸದನವನ್ನು ನಡೆಸಿ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಪ್ರಶ್ನೋತ್ತರ ಪಟ್ಟಿಯನ್ನು ಹರಿದು ಹಾಕಿ ಸದನದಿಂದ ಹೊರಗಡೆ ಹೋದರು)

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ತಾವೂ ಕೂಡ ಅದೇ ಭಾಗದಿಂದ ಬಂದವರು. ದಯವಿಟ್ಟು ಸದನವನ್ನು ಮುಂದಕ್ಕೆ ಹಾಕಿ. ಮಾನ್ಯ ಪ್ರಕಾಶ್‌ರವರೆ, ಇದರ ಬಗ್ಗೆ ತಾವೂ ಕೂಡ ದಯವಿಟ್ಟು ನಿರ್ಣಯ ತೆಗೆದುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು: ಇರಲಿ, ಎಲ್ಲರ ಅಭಿಪ್ರಾಯವನ್ನುಕೇಳೋಣ.

ಶ್ರೀ ಸಿ.ರಾಜೇಂದ್ರವರ್ಮಾ: ಮಾನ್ಯ ಅಧ್ಯಕ್ಷರೆ, ಸದನವನ್ನು ಮುಂದಾಕಿ ಎಂಬ ವಿಚಾರ ಇದ್ದಾಗ ಏನು ಮಾಡಬೇಕಾಗುತ್ತದೆ? ಇಡೀ ರಾಜ್ಯದಲ್ಲಿ ಈ ರೀತಿಯಾದ ಒಂದು ದೊಡ್ಡ ಗಂಡಾಂತರ ಇರುವಾಗ..

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ರಾಜ್ಯದ ಹಿತಾಸಕ್ತಿಗೆ ಮತ್ತು ರಾಜ್ಯದ ಜನತೆಗೆ ಒಳ್ಳೆಯದಾಗಲೆಂದು ಶಾಸನ ಮಾಡುವುದಕ್ಕೆ ರಚನೆಯಾಗಿರತಕ್ಕಂಥ ಶಾಸನ ಸಭೆ ಇದು. ಇಡೀ ರಾಜ್ಯಕ್ಕೆ ಅನ್ಯಾಯವಾಗಿ ಇವತ್ತಿನ ದಿವಸ ಇಡೀ ರಾಜ್ಯದಲ್ಲಿ ಹತ್ತಿ ಉರಿಯುತ್ತಿರುವಾಗ ನಾವು ಇಲ್ಲಿ ಕುಳಿತುಕೊಂಡು ಪಿಟೀಲ್ ಬಾರಿಸತಕ್ಕಂಥದರಲ್ಲಿ ಏನರ್ಥವಿದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ತಾಂತ್ರಿಕತೆಗೋಸ್ಕರ ಸದನ ನಡಸಲೇ ಬೇಕೆಂದು ಸದನ ನಡೆಸತಕ್ಕಂಥದು ಮತ್ತು ಇಡೀ ರಾಜ್ಯಕ್ಕೆ ಅನ್ಯಾಯವಾಗಿರುವಾಗ ನಾವು ಸದನ ನಡೆಸುತ್ತೇವೆಂದು ಹಠ ಮಾಡತಕ್ಕಂಥ ನಿಮ್ಮ ಧೋರಣೆಯನ್ನು ವಿರೋಧಿಸಿ ನಾನೂ ಕೂಡ ಸದನದಿಂದ ಹೊರಕ್ಕೆ ಹೋಗುತ್ತೇನೆ.

(ಈ ಹಂತದಲ್ಲಿ ಮಾನ್ಯ ಜೆ.ಸಿ.ಮಾಧುಸ್ವಾಮಿಯವರು ಸದನದಿಂದ ಹೊರಕ್ಕೆ ಹೋದರು)

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಸದನವನ್ನು ಒಂದು ದಿವಸ ಮುಂದಕ್ಕೆ ಹಾಕಿದರೆ ಏನು ಅನಾಹುತವಾಗುವುದಿಲ್ಲ. ಸರ್ಕಾರದ ಬೆಂಬಲ ಇದಕ್ಕೆ ಇದೆಯೋ ಅಥವಾ ಇಲ್ಲವೋ ಎನ್ನತಕ್ಕಂಥದರ ಬಗ್ಗೆ ಸ್ಪಷ್ಟೀಕರಣ ಮಾಡಬೇಕು. ಇದಕ್ಕೆ ನಮ್ಮ ಬೆಂಬಲ ಇಲ್ಲ, ಆದ್ದರಿಂದ ಸದನವನ್ನು ನಡೆಸುತ್ತೇವೆಂದು ಹೇಳಿಬಿಡಿ. ತಾವು ಈ ರೀತಿಯಾಗಿ ಮಾಡುತ್ತಿರುವುದು ದಯವಿಟ್ಟು ಸರಿಯಲ್ಲ.

(ಗೊಂದಲ)

ಶ್ರೀ ಸಿ. ರಾಜೇಂದ್ರವರ್ಮಾ: ನಾವು ಹೆಡ್‌ಕ್ವಾರ್ಟರ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳ ಜೊತೆ ಸಭೆ ನಡೆಸಬೇಕಾಗುತ್ತದೆ.

(ಗೊಂದಲ)

ಶ್ರೀ ಎಂ.ಪಿ.ವೆಂಕಟೇಶ್: ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರೆಲ್ಲರೂ ಎಲ್ಲಿಗೆ ಹೋಗಿದ್ದಾರೆ? ವಿರೋಧಪಕ್ಷದ ನಾಯಕರು ಇಲ್ಲಿಗೆ ಬಂದು ಹೇಳಬೇಕಾಗಿತ್ತು.

(ಗೊಂದಲ)